

ಊಟದ ವಿವಿಧ ಪದಾರ್ಥಗಳನ್ನು ಬಡಿಸಲು ಇಟ್ಟಿರುತ್ತಾರೆ. ಬಡಿಸುವವರು ಆಕರ್ಷಕ ಸಮವಸ್ತ್ರ ಧರಿಸಿರುತ್ತಾರೆ. ತಲೆಗೆ ಬಿಳಿ ಹ್ಯಾಟು, ಎದೆಗೆ ಏಪ್ರನ್, ಕೈಗಳಿಗೆ ಗವುಸು. ಬಡಿಸುವ ಸಲಕರಣೆಗಳು ಕಲಾತ್ಮಕವಾಗಿವೆ. ಸೌಟಾಗಲಿ, ಹಿಡಿ ಇಕ್ಕಳಗಳಾಗಲಿ ಎಲ್ಲವೂ ಅಂದ. ವಿದ್ಯಾರ್ಥಿಗಳು ಹಣಕೊಡಲು ಪ್ಲಾಸ್ಟಿಕ್ ಕಾರ್ಡ್ ಬಳಸುತ್ತಾರೆ. ತಮಗೆ ಬೇಕಾದ ಪದಾರ್ಥಗಳನ್ನು ತಟ್ಟೆಗಳಲ್ಲಿ ಹಾಕಿಸಿ ಕೊಂಡು, ಟ್ರೇನಲ್ಲಿ ತೆಗೆದುಕೊಂಡು ಹೋಗುತ್ತಾರೆ. ಊಟವಾದ ನಂತರ ಆ ತಟ್ಟೆ-ಟ್ರೇಗಳನ್ನು ದೊಡ್ಡ ಪ್ಲಾಸ್ಟಿಕ್ ಡ್ರಮ್‌ಗಳಲ್ಲಿ ಹಾಕುತ್ತಾರೆ, ಅಮೇರಿಕಾ ವಿಶ್ವವಿದ್ಯಾನಿಲಯಗಳಲ್ಲಿನಂತೆ. ಕೆಲವು ಪದಾರ್ಥಗಳನ್ನು ತಿನ್ನುವಾಗ ಅವು ಹಿತವಾದ ಬಿಸಿಯಲ್ಲೇ ಇರಲಿ ಎಂದು ಚಿಕ್ಕ ಹಗುರವಾದ ಸ್ಟೋವ್ ಮೇಲೆ ಅವುಗಳನ್ನಿಡುತ್ತಾರೆ.

ಇನ್ನೊಂದು ಮೆಚ್ಚುವ ವ್ಯವಸ್ಥೆ ಎಂದರೆ ಕ್ಯಾಂಪಸ್ಸಿನಲ್ಲಿ ಅಲ್ಲಲ್ಲಿ ಸಾರ್ವಜನಿಕ ಸೈಕಲ್ ಸ್ಟ್ಯಾಂಡ್‌ಗಳಿರುತ್ತವೆ. ಕಾಂಪಸ್‌ನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗಲು ಯಾರು ಬೇಕಾದರೂ ಈ ಸೈಕಲ್ ತೆಗೆದುಕೊಳ್ಳಬಹುದು. ಅದರ ಬಾಡಿಗೆಗೆ ನಾಣ್ಯಗಳನ್ನೋ, ಕಾರ್ಡುಗಳನ್ನೋ ಅಲ್ಲಿರುವ ಯಂತ್ರಕ್ಕೆ ಹಾಕಿದರೆ ಬೈಸಿಕಲ್ ಬಿಡುಗಡೆಯಾಗಿ ಸಿಗುತ್ತದೆ. ಗುರಿ ತಲುಪಿದ ಕಡೆ ಅಲ್ಲಿರುವ ಮತ್ತೊಂದು ಸೈಕಲ್ ಸ್ಟ್ಯಾಂಡಿನಲ್ಲಿ ಅದನ್ನು ಬಿಡಬಹುದು.

ಪಾಶ್ಚಾತ್ಯ ದೇಶಗಳಲ್ಲಿರುವಂತೆ ಇಲ್ಲಿಯೂ ೨೪ ಗಂಟೆ ತೆರೆದಿರುವ ಅಂಗಡಿಗಳಿವೆ. ಅಲ್ಲಿ ಎಲ್ಲ ವಸ್ತುಗಳೂ ಲಭಿಸುತ್ತವೆ. ದಿನಸಿ, ಸ್ಟೇಷನರಿ, ಔಷಧಿ, ಪುಸ್ತಕ, ಪತ್ರಿಕೆ, ಹಣ್ಣು ತರಕಾರಿ ಇತ್ಯಾದಿ. ಪೆಟ್ರೋಲ್ ಬಂಕ್‌ಗಳಲ್ಲಿ ಕಾರಿನ ಚಿಕ್ಕ ಚಿಕ್ಕ ಬಿಡಿ ಭಾಗಗಳೂ ಮಾರಾಟಕ್ಕೆ ದೊರೆಯುತ್ತವೆ.

ಇಲ್ಲಿನ ಮಾಲ್‌ಗಳು, ವ್ಯಾಪಾರ ಸಮುಚ್ಚಯಗಳು ಪಾಶ್ಚಾತ್ಯ ದೇಶಗಳಲ್ಲಿರುವ ಮಾಲ್‌ಗಳನ್ನು ಮೀರಿಸುತ್ತವೆ. ಎಲ್ಲ ಬಗೆಯ ಸೌಕರ್ಯಗಳು, ಎಸ್ಕಲೇಟರುಗಳು, ಹೋಟೆಲುಗಳು, ಉದ್ಯಾನಗಳು, ಮನರಂಜನೆ ನೀಡುವ ಆರ್ಕೇಡುಗಳು – ಕೃತಕ ಹಿಮರಂಗದ ಮೇಲಿನ ಸ್ಕೇಟಿಂಗ್ ವರ್ತುಲಗಳು, ಈ ಕಟ್ಟಡಗಳಲ್ಲಿ ಎಲ್ಲವೂ ಇವೆ.

ಕೆಲವು ನಗರಗಳಲ್ಲಿ ನೆಲಮಾಳಿಗೆಯ ವ್ಯಾಪಾರ ಸಮುಚ್ಚಯಗಳೂ ಇವೆ. ಮೇಲುಗಡೆ ರಸ್ತೆಗಳನ್ನು ದಾಟುವೆಡೆ ಉಪಮಾರ್ಗಗಳಲ್ಲಿಳಿದು ಈ ನೆಲಮಾಳಿಗೆ ಅಂಗಡಿಗಳಿಗೆ ಹೋಗಬಹುದು. ಎಲ್ಲಾ ಕಡೆಯ ರಸ್ತೆಯ ವಿದ್ಯುದ್ದೀಪಗಳು ಯಾವತ್ತೂ ಸಾಮಾನ್ಯ ಟ್ಯೂಬ್ ಲೈಟ್‌ಗಳಲ್ಲ. ಸುಂದರವಾದ ಕಲಾತ್ಮಕವಾದ ಪ್ರಖರ ದೀಪಗಳೇ ಎಲ್ಲ ಕಡೆ ಇವೆ. ಚೀನಾದ ಅತ್ಯಂತ ಹರ್ಷದಾಯಕ ಸ್ಥಳಗಳೆಂದರೆ ಅವರ ಪಾರ್ಕ್‌ಗಳು ಮತ್ತು ಸಾರ್ವಜನಿಕ ಸ್ಥಳಗಳು – ದಿನದಲ್ಲಿ ದುಡಿದ ಆಯಾಸವೆಲ್ಲ ಪರಿಹಾರವಾಗುವ ಸ್ಥಳಗಳು. ಸುಂದರವಾಗಿ ಕಲಾತ್ಮಕವಾಗಿ ಬೆಳೆಸಿದ ಗಿಡಮರ ಬಳ್ಳಿ ಹುಲ್ಲುಹಾಸುಗಳು, ನಡೆ ಯಲು ಇರುವ ಸಿಮೆಂಟಿನ ಚದುರಬಿಲ್ಲೆಗಳ ಇಲ್ಲವೆ ನುಣುಪಾದ ಗೋಲ ಕಲ್ಲುಗಳಿಂದ ಮಾಡಿದ ಕಾಲುದಾರಿಗಳು, ನೀರಿನ ಕಾರಂಜಿ ಗಳು, ಪುಟ್ಟ ಪುಟ್ಟ ಜಲಪಾತಗಳು, ಜುಳು ಜುಳು ಹರಿಯುವ ಕಿರು ತೊರೆಗಳು, ಕೊಳಗಳು; ಅವುಗಳ ಮಧ್ಯೆ ಹಾಗೂ ಸುತ್ತ ಅಲ್ಲಲ್ಲಿ ಹಾಕಿದ ಹೆಬ್ಬಂಡೆಗಳು, ನಡೆದು ಹೋಗಲು ಹಾಕಿದ ಕಲ್ಲಿನ ಪಾವಟಿಗೆಗಳು, ತೇವತುಂಬಿದ ಪಥಗಳಲ್ಲಿ ನಡೆಯಲು ಹಾಕಿರುವ ಮರದ ಹಲಗೆಗಳು – ಇವೇ ಮುಂತಾದ ಹಲವು ಮನರಂಜನೆಯ ಸಂಗತಿಗಳು ಅಲ್ಲಿವೆ. ಕೃತಕ ಸಾರಂಗಗಳು, ಕಣಿವೆಗಳ ಮೇಲಿನ ತೂಗುಸೇತುವೆಗಳು – ಖುಷಿ ಕೊಡುವ ಇಂತಹ ಅನೇಕ ಬಗೆಯ ಚೆಲುವಿನ ನೋಟಗಳು ಇಲ್ಲಿ ಎದುರಾಗುತ್ತವೆ. ಹಸಿರು ವನಸಿರಿ, ಬಣ್ಣಬಣ್ಣದ ಹೂಗಳಿಂದ ತುಂಬಿರುವ ಈ ಉದ್ಯಾನಗಳು ಮನಮೋಹಕವಾಗಿವೆ. ಇವೆಲ್ಲವನ್ನೂ ಚೆನ್ನಾಗಿ ನೋಡಿಕೊಳ್ಳುವ ತೋಟಗಾರಿಕೆ ವ್ಯವಸ್ಥೆ ಇದೆ. ಪ್ರತಿಯೊಂದು ಸರೋವರ, ಕೊಳ, ತೊರೆ, ಕಾಲುವೆ ಕಲಾತ್ಮಕವಾಗಿ ವಿನ್ಯಾಸಗೊಂಡು ಚೆಲುವನ್ನು ಹೊದ್ದಿವೆ.

## ಕುಲಶೇಖರ ಆಳ್ವಾರರ ಭಕ್ತಿ

'ಮುಕುಂದಮಾಲಾ' ಎಂಬ ಭಕ್ತಿಭಾವಭರಿತವಾದ ಸ್ತೋತ್ರವನ್ನು ರಚಿಸಿದ ಚೇರರ ರಾಜ ಕುಲಶೇಖರ ಆಳ್ವಾರರಿಗೆ ರಾಮಾವತಾರ, ಕೃಷಾವತಾರ ಎಂದರೆ ತುಂಬ ಪ್ರೀತಿ. ಆ ಅವತಾರಗಳ ಕತೆಗಳನ್ನು ಕೇಳುತ್ತಿದ್ದರೆ ಅವರು ಮೈಮರೆತುಬಿಡುತ್ತಿದ್ದರು.

ಒಂದು ಸಲ ಅರಮನೆಯಲ್ಲಿ ರಾಮಾಯಣ ಪಾರಾಯಣವಾಗುತ್ತಿತ್ತು. ಶ್ರೀರಾಮನು ಜನಸ್ಥಾನದಲ್ಲಿದ್ದ ಖರ ದೂಷಣ ಮೊದಲಾದ ೧೪,೦೦೦ ರಾಕ್ಷಸವೀರರೊಡನೆ ಏಕಾಕಿಯಾಗಿ ಯುದ್ಧ ಮಾಡುತ್ತಿದ್ದ ಪ್ರಸಂಗವನ್ನು ಪೌರಾಣಿಕರು ಓದುತ್ತಿದ್ದರು. ಅದನ್ನು ಕೇಳುತ್ತಾ ಆಳ್ವಾರರು ಪರವಶರಾಗಿ – 'ಆಹಾ ! ಸೀತಾದೇವಿಯ ಕಾವಲಿಗೆ ಲಕ್ಷ್ಮಣನನ್ನು ನಿಲ್ಲಿಸಿ, ನನ್ನ ರಾಮಸ್ವಾಮಿ ಒಬ್ಬನೇ ಯುದ್ಧಮಾಡುತ್ತಿದ್ದಾನಲ್ಲವೆ! ನಾನು ನನ್ನ ಸ್ವಾಮಿಯ ಸಹಾಯಕ್ಕೆ ಹೋಗಬೇಕು' ಎಂದು ಕವಚವನ್ನು ಧರಿಸಿ, ಬಿಲ್ಲುಬಾಣ ಕತ್ತಿಗಳನ್ನು ಎತ್ತಿಕೊಂಡು ಹೊರಟೇಬಿಟ್ಟರು.

ಆಗ ಸಭಿಕರಲ್ಲಿ ಕೆಲವರು ಅವರನ್ನು ನಿಲ್ಲಿಸಲು ಒಂದು ಉಪಾಯ ಮಾಡಿದರು. ಅದೇ ರಾಮಾಯಣದಲ್ಲಿ ಬರುವ ಇನ್ನೊಂದು ಪದ್ಯವನ್ನು ಪೌರಾಣಿಕರಿಂದ ಓದಿಸಿದರು. 'ಶ್ರೀರಾಮನು ರಾಕ್ಷಸರನ್ನೆಲ್ಲ ಕೊಂದು ಜಯಶಾಲಿಯಾಗಿ ಹಿಂದಿರುಗಿದನು. ಸೀತೆಯು ಆತನನ್ನು ಎದುರುಗೊಂಡು ಆನಂದದಿಂದ ಆಲಿಂಗಿಸಿಕೊಂಡಳು' ಎಂದು ಅವರು ಹೇಳಿದುದನ್ನು ಕೇಳಿ, ಕುಲಶೇಖರರು ಸಂತೋಷದಿಂದ ಹಿಂದಿರುಗಿದರು. ತನ್ನನ್ನು ತಾನು ಮರೆತು ಭಗವಂತನನ್ನು ಜೀವಂತ ಕಂಡಾಗಲಲ್ಲವೇ ನಿಜವಾದ ಭಕ್ತಿ ?

*(ಆಧಾರ: '**ಆಳ್ವಾರ್‌ಗಳ ಕತೆಗಳು**', ಜಿ.ಪಿ.ರಾಜರತ್ನಂ, ಪ್ರ : 'ವಿದೇಹ' ಬೆಂಗಳೂರು, ೧೯೭೩)*


# ‘ಯಾರ ದೋಷವನ್ನೂ ನೋಡಬೇಡ’

ಸ್ವಾಮಿ ಮುಕ್ತಿರೂಪಾನಂದ

ಶ್ರೀಮಾತೆಯವರು ತಮ್ಮ ಭಕ್ತರ ಮುಂದೆ ಸಾಂದರ್ಭಿಕವಾಗಿ ನೀಡಿದ ಕೆಲವು ಬೋಧನೆಗಳು ಲೌಕಿಕ ದೃಷ್ಟಿಯಿಂದಲೂ, ಆಧ್ಯಾತ್ಮಿಕ ಸಾಧನೆಯ ದೃಷ್ಟಿಯಿಂದಲೂ ವಿಶೇಷ ಮಹತ್ವವನ್ನು ಹೊಂದಿವೆ. ಅಂಥ ಒಂದು ಬೋಧನೆಯ ಸುತ್ತ ವಿಶ್ಲೇಷಣೆಯನ್ನು ನಡೆಸಿರುವ ಲೇಖಕರು ಸಿಂಗಾಪುರ ರಾಮಕೃಷ್ಣ ಮಿಷನ್ನಿನ ಅಧ್ಯಕ್ಷರಾಗಿದ್ದರು. ಬಹುಶ್ರುತ ವಿದ್ವಾಂಸರೂ, ಚಿಂತಕರೂ, ಉತ್ತಮ ಲೇಖಕರೂ ಆಗಿರುವ ಪೂಜ್ಯರು ಸದ್ಯ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ.

ಶ್ರೀಮಾತೆಯವರು ಹೇಳಿದ ಒಂದು ಮಹತ್ವಪೂರ್ಣವಾದ ಉಪದೇಶವಿದೆ. ಆ ಉಪದೇಶವನ್ನು ನಾವು ಎಷ್ಟೋ ಸಲ ಓದಿದ್ದೇವೆ ಅಥವಾ ಕೇಳಿದ್ದೇವೆ. ಆದರೆ ನಮ್ಮ ಜೀವನದಲ್ಲಿ ಅದನ್ನು ಸಾಧ್ಯವಿದ್ದಷ್ಟು ಪಾಲಿಸಬೇಕೆಂಬ ಆಗ್ರಹವನ್ನು ನಾವು ತೋರಿಸಿಲ್ಲ. ನಮ್ಮ ಅಶಾಂತಿಗೊಂದು ಕಾರಣ, ಈ ಉಪದೇಶವನ್ನು ಪಾಲಿಸದೆ ಇರುವುದು. ಶ್ರೀಮಾತೆಯವರ ದೇಹಾವಸಾನಕ್ಕೆ ಐದು ದಿನಗಳ ಮೊದಲು ಒಬ್ಬ ಭಕ್ತೆ, ಅವಳ ಹೆಸರು ಅನ್ನಪೂರ್ಣೆಯ ತಾಯಿ, ಅವರನ್ನು ನೋಡಲು ಬಂದಳು. ಅವಳು ಶ್ರೀಮಾತೆಗೆ ಪ್ರಣಾಮ ಸಲ್ಲಿಸಿ ಅಳುತ್ತ ಹೇಳಿದಳು – ‘‘ತಾಯಿ, ನೀವು ಹೋದಮೇಲೆ ನಮ್ಮ ಗತಿಯೇನು?’’ ಕನಿಕರದಿಂದ ಅವಳೆಡೆಗೆ ನೋಡಿ ಶ್ರೀಮಾತೆ ತಮ್ಮ ಕೊನೆಯ ಉಪದೇಶವನ್ನು ನೀಡಿದರು: ‘‘ಒಂದು ವಿಷಯ ಮರೆಯಬೇಡ. ನಿನಗೆ ಶಾಂತಿ ಬೇಕಾದರೆ ಯಾರ ದೋಷವನ್ನೂ ನೋಡಬೇಡ. ನಿನ್ನ ದೋಷವನ್ನೇ ನೋಡಬೇಕು. ಪ್ರಪಂಚದಲ್ಲಿ ಎಲ್ಲರನ್ನೂ ನಿನ್ನವರೆಂದು ಭಾವಿಸಲು ಪ್ರಯತ್ನಿಸು. ಯಾರೂ ಪರರಲ್ಲಮ್ಮ, ಎಲ್ಲರೂ ನಿನ್ನವರೆ.’’ ಯಾವ ಉಪದೇಶವನ್ನು ತಾವು ಜೀವನದುದ್ದಕ್ಕೂ ಮರೆಯದೆ ಅನುಸರಿಸಿದರೋ ಅದನ್ನೇ ಮಾತಿನ ಮೂಲಕ ವ್ಯಕ್ತಪಡಿಸಿದರು. ಇನ್ನೊಂದು ಸಂದರ್ಭದಲ್ಲಿ ಇದೇ ಮಾತನ್ನು ಹೇಳಿದ್ದಾರೆ. ‘‘ಯಾರ ದೋಷವನ್ನೂ ನೋಡಬೇಡ. ಹಾಗೆ ಮಾಡಿದರೆ ನಿನ್ನ ಕಣ್ಣೇ ದೋಷಪೂರ್ಣವಾಗುವುದು.’’

ಈ ಉಪದೇಶ ಮೇಲುನೋಟಕ್ಕೆ ತುಂಬ ಸರಳವಾಗಿ ತೋರುತ್ತದೆ. ಅದಕ್ಕೆ ಯಾವುದೇ ವಿವರಣೆಯ ಅಗತ್ಯ ಕಾಣುವುದಿಲ್ಲ. ಆದರೆ ದೊಡ್ಡ ಸಮಸ್ಯೆಯೆಂದರೆ, ಪ್ರತಿದಿನದ ಜೀವನದಲ್ಲಿ ಇತರರ ತಪ್ಪುಗಳನ್ನೂ, ದೋಷಗಳನ್ನೂ ನೋಡದೆ ಇರಲು ಹೇಗೆ ಸಾಧ್ಯ? ಎಲ್ಲರ ಜೊತೆಗೆ ಇರುವಾಗ ಇತರರ ಲೋಪದೋಷಗಳನ್ನು ನೋಡುವುದು ಸಹಜ. ಅದನ್ನು ತಪ್ಪಿಸುವುದು ಅಸಾಧ್ಯ. ಅರಣ್ಯದಲ್ಲಿ ಅಥವಾ ಗುಹೆಯಲ್ಲಿ ಏಕಾಂತವಾಸ ಮಾಡುವವರ ಮಾತು ಬೇರೆ. ಅವರಿಗೆ ಬೇರೆಯವರ ಸಂಪರ್ಕವೇ ಇಲ್ಲದಿರುವುದರಿಂದ ಅವರು ಬೇರೆಯವರ ಲೋಪದೋಷಗಳನ್ನು ನೋಡಬೇಕಾಗಿಲ್ಲ. ಆದರೆ ಆ ರೀತಿಯ ಜೀವನ ನಮ್ಮದಲ್ಲ. ಪ್ರತಿದಿನ ಹತ್ತಾರು ಜನರೊಂದಿಗೆ – ಆತ್ಮೀಯರು ಅಥವಾ ಪರಕೀಯರೊಂದಿಗೆ ಬೆರೆಯಬೇಕಾಗುತ್ತದೆ. ಸಾಧಾರಣ ಮನುಷ್ಯರಾದ ನಮಗೆ ಶ್ರೀಮಾತೆಯವರ ಈ ಉಕ್ತಿಯನ್ನು ಅನುಸರಿಸುವುದು ಸಾಧ್ಯವೆ? ಎಂಬ ಪ್ರಬಲ ಸಂಶಯ ಮನಸ್ಸಿನಲ್ಲಿ ಬರುವುದು ಸಹಜ.



ಸ್ವಲ್ಪ ಆಳವಾಗಿ ಶ್ರೀಮಾತೆಯವರ ಮಾತುಗಳ ಅರ್ಥವನ್ನು ಪರೀಕ್ಷಿಸಿದರೆ, ಅದರಲ್ಲಿ ಯಾವ ಸಮಸ್ಯೆಯೂ ಇಲ್ಲ. ತಂದೆ ತಾಯಿ ತಮ್ಮ ಮಕ್ಕಳಲ್ಲಿ ಅಥವಾ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಲ್ಲಿ ತಪ್ಪುಗಳನ್ನು, ದೋಷಗಳನ್ನು ನೋಡಿ ತಿದ್ದದೆ ಹೋದರೆ ಆ ಮಕ್ಕಳ ಉನ್ನತಿ, ಪ್ರಗತಿಯಾಗುವುದಾರೂ ಹೇಗೆ? ತಮ್ಮ ದೋಷಗಳನ್ನು ತಿದ್ದಿಕೊಂಡು ಸುಧಾರಿಸುವ ಅವಕಾಶದಿಂದ ಅವರನ್ನು ವಂಚಿತರನ್ನಾಗಿ ಮಾಡಿದಂತಾಗುತ್ತದೆ. ಚಿಕ್ಕ ಮಕ್ಕಳ ಮನಸ್ಸು ಸರಳವಾಗಿರುತ್ತದೆ. ಯಾವುದು ಸರಿ ಯಾವುದು, ತಪ್ಪು ಎಂಬ ಸರಿಯಾದ ಅರಿವು ಅವರಿಗಿರುವುದಿಲ್ಲ. ಅವರು ತಪ್ಪುಗಳನ್ನು ಮಾಡುವುದು ತುಂಬ ಸಹಜ. ಅವರ ನಡತೆಯಲ್ಲಿನ ಕುಂದುಕೊರತೆಗಳನ್ನು ನಿವಾರಿಸಿ, ಅವರನ್ನು ಸರಿಯಾದ ಮಾರ್ಗಕ್ಕೆ ತರುವುದು ಹಿರಿಯರ ಕರ್ತವ್ಯ. ಅದೇ ರೀತಿಯಾಗಿ ನಮಗೆ ಹಿರಿಯರಾದವರು, ನಮ್ಮ ಒಳ್ಳೆಯದನ್ನು ಬಯಸುವವರು ನಮ್ಮ ದೋಷಗಳತ್ತ ನಮ್ಮ ಗಮನವನ್ನು ಸೆಳೆದು ತಿದ್ದಿಕೊಳ್ಳುವ ಒಂದು ಅವಕಾಶವನ್ನು ನಮಗೆ ಒದಗಿಸುತ್ತಾರೆ. ಸರಕಾರ, ಧರ್ಮ, ಸಮಾಜ ತಮ್ಮದೇ ಆದ ನೀತಿ ನಿಯಮಗಳನ್ನು

ಎಲ್ಲರ ಒಳಿತಿಗಾಗಿ ಜಾರಿಗೆ ತರುತ್ತವೆ, ತಪ್ಪಿಸ್ಥರನ್ನು ಶಿಕ್ಷಿಸುತ್ತವೆ. ಇದೆಲ್ಲ ಸಮುದಾಯದ ಒಳಿತಿಗಾಗಿ. ಬೇರೆಯವರ ತಪ್ಪುಗಳನ್ನು ನಾವು ಹೇಗೆ ನೋಡದೆ ಇರಲಾರೆವೊ ಅದೇ ರೀತಿ ಬೇರೆಯವರು ಸಹ ನಮ್ಮ ನ್ಯೂನತೆಗಳನ್ನು ದೂಷಿಸದೆ ಇರಲಾರರು. ಹಾಗಾದರೆ ಈ ಸಂಕಟದಿಂದ ಪಾರಾಗುವ ಉಪಾಯವೇನು?

ಇನ್ನೊಂದು ಸಮಸ್ಯೆಯೆಂದರೆ ಶ್ರೀಮಾತೆ, ಶ್ರೀರಾಮಕೃಷ್ಣರು ತಮ್ಮ ಶಿಷ್ಯರ ಮತ್ತು ಭಕ್ತರ ಲೋಪದೋಷಗಳನ್ನು ಬಹು ಜಾಗರೂಕತೆಯಿಂದ ಗಮನಿಸುತ್ತಿದ್ದರಲ್ಲದೆ, ಅವನ್ನು ಭಕ್ತರಿಗೆ ಸೂಚ್ಯವಾಗಿ ತಿಳಿಸುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ತಮ್ಮ ದೋಷಗಳನ್ನು ತಿದ್ದಿಕೊಳ್ಳದವರನ್ನು ಕ್ರಮವಾಗಿ ಗದರಿಸಿದ್ದೂ ಉಂಟು. ಇವನ್ನೆಲ್ಲ ನೋಡಿದ ಮೇಲೆ, ಯಾವ ರೀತಿಯಾಗಿ ಈ ಉಪದೇಶವನ್ನು ನಮ್ಮ ಜೀವನದಲ್ಲಿ ಅನುಸರಿಸಬೇಕೆಂಬ ಸಮಸ್ಯೆ ಉಳಿದೇ ಉಳಿಯುತ್ತದೆ.

ನಿಜವಾದ ಸಮಸ್ಯೆ ಬೇರೆಯವರ ದೋಷಾನ್ವೇಷಣೆ ಅಥವಾ ಅವರಲ್ಲಿಯ ನ್ಯೂನತೆಗಳನ್ನು ಕಾಣುವುದರಲ್ಲಿಲ್ಲ. ಅದು ನಮ್ಮ ಹಿಂದಿರುವ ಉದ್ದೇಶ, ಮನೋಭಾವವನ್ನು ಅವಲಂಬಿಸಿದೆ. ನಾವು ಯಾವ ದೃಷ್ಟಿಯಿಂದ ಬೇರೆಯವರ ಕುಂದುಕೊರತೆಗಳನ್ನು, ವಿಲಕ್ಷಣತೆಯನ್ನು ಎತ್ತಿತೋರಿಸಲು ಇಚ್ಛಿಸುತ್ತೇವೆಯೋ ಆ ಉದ್ದೇಶ ಮುಖ್ಯವಾದುದ್ದು. ಅನ್ಯರ ಲೋಪಗಳನ್ನು ನಾವು ಎರಡು ಉದ್ದೇಶಗಳಿಂದ ನೋಡಬಯಸುತ್ತೇವೆ.

ಮೊದಲನೆಯದಾಗಿ, ಬೇರೆಯವರು ನಮಗಿಂತಲೂ ಕಡಿಮೆಯವರು; ಅವರಿಗಿಂತಲೂ ನಾವು ಎಷ್ಟೋ ಮೇಲ್ಮಟ್ಟದಲ್ಲಿರುವವರು ಎಂದು ಹೇಳಿಕೊಳ್ಳುವುದರಲ್ಲಿ ತೃಪ್ತಿಯಿದೆ, ಸಂತೋಷವಿದೆ. ಇದು ಅಹಂಕಾರದಿಂದ ಉತ್ಪನ್ನವಾದ ಭ್ರಾಂತಿ. ನಾವೆಲ್ಲ ಈ ಭ್ರಾಂತಿಯ ಬಲೆಯಲ್ಲಿ ಸಿಕ್ಕಿದ್ದೇವೆ. ನಮ್ಮ ತಪ್ಪುಗ್ರಹಿಕೆಯೆಂದರೆ, ನಾವೆಲ್ಲ ಲೋಪದೋಷರಹಿತರೂ ಪರಿಪೂರ್ಣರೂ ಅಲ್ಲದಿದ್ದರೂ ಪೂರ್ಣತೆಯ ಸಮೀಪದಲ್ಲಿರುವವರು. ಆದ್ದರಿಂದ ನಾವು ಇತರರಿಗಿಂತ ಎಷ್ಟೋ ಬುದ್ಧಿವಂತರು, ನೀತಿವಂತರು, ಮತ್ತು ಉತ್ತಮ ಶ್ರೇಣಿಯವರು. ಅಜ್ಞಾನಜನಿತವಾದ ಮನೋಭಾವ ಪರಸ್ಪರರ ತುಲನೆ, ಪೈಪೋಟಿ, ಸ್ಪರ್ಧೆಗಳಿಗೆ ಕಾರಣವಾಗಿದೆ. ಪರಸ್ಪರರನ್ನು ನಿಂದಿಸುವುದು, ಟೀಕಿಸುವುದು ಸ್ಪರ್ಧೆ, ತುಲನೆಗಳ ಪರಿಣಾಮ. ಬೇರೆಯವರು ನಮಗಿಂತಲೂ ಕೆಳಮಟ್ಟದವರೆಂದು ತೋರಿಸದೆ ಹೋದರೆ ನಮ್ಮ ಮಹತ್ವವನ್ನು, ವಿಶೇಷತೆಯನ್ನು ಸಾರುವುದಾದರೂ ಹೇಗೆ? ಬೇರೆಯವರನ್ನು ನಿಂದಿಸಿದರೆ ಪರೋಕ್ಷವಾಗಿ ನಾವು ವಿಶೇಷ ಗುಣಸಂಪನ್ನರೆಂದು ಹೇಳಿಕೊಂಡಂತಾಯಿತು. ಇಲ್ಲಿದೆ ನಮ್ಮ ಪರೀಕ್ಷೆ. **ಬೇರೆಯವರನ್ನು ಕುರಿತು ತಾತ್ಸಾರದಿಂದ, ತಿರಸ್ಕಾರದಿಂದ ಮಾತನಾಡಿದಾಗ ನಮಗೆ ಸಂತೋಷ, ತೃಪ್ತಿಯಾದರೆ ಅದು ತಪ್ಪು.** ಅದೊಂದು ಅಹಿತಕರವಾದ ಅಭ್ಯಾಸ, ಅನಾರೋಗ್ಯಕರವಾದ ಚಟ. ಅದನ್ನು ಪ್ರಯತ್ನಪೂರ್ವಕವಾಗಿ ತ್ಯಜಿಸದೆ ಇದ್ದರೆ ನಮ್ಮ ಅಹಂಕಾರವನ್ನು, ಅಜ್ಞಾನವನ್ನು ನಾವೇ ಸ್ವ ಇಚ್ಛೆಯಿಂದ ಪೋಷಿಸಿಕೊಂಡಂತಾಗುತ್ತದೆ. ಇದರ ಫಲ, ದುಃಖ ಮತ್ತು ಅಶಾಂತಿ. ಶ್ರೀಮಾತೆಯವರು ಹೇಳುವುದು ಈ ರೀತಿಯಾದ ಹಾನಿಕರವಾದ ಪ್ರವೃತ್ತಿಯನ್ನು ತ್ಯಜಿಸಲು.

ಎರಡನೆಯ ಉದ್ದೇಶವೆಂದರೆ, ಬೇರೆಯವರ ತಪ್ಪುಗಳನ್ನು, ದೋಷಗಳನ್ನು ನೋಡುವುದು ಸಂಪೂರ್ಣವಾಗಿ ಕೆಟ್ಟದ್ದೇನಲ್ಲ. ಅದರಿಂದ ಬೇರೆಯವರ ಉಪಕಾರವೂ ಸಾಧ್ಯವಿದೆ. ತಂದೆ, ತಾಯಿ, ಶಿಕ್ಷಕರು, ಗುರುಹಿರಿಯರಾದ ಹಿತಚಿಂತಕರೂ ತಮ್ಮ ರಕ್ಷಣೆಯಲ್ಲಿರುವ ಚಿಕ್ಕವರ ನಿಂದಾಸ್ಪದವಾದ, ಸ್ವಾರ್ಥಪರವಾದ ಲೋಪದೋಷಗಳನ್ನು ಎಚ್ಚರಿಕೆಯಿಂದ ಗಮನಿಸಿ, ಅವುಗಳಿಂದ ಅವರನ್ನು ರಕ್ಷಿಸುವ ಹೊಣೆ ಅವರದು. ಈ ಕರ್ತವ್ಯ ಎಷ್ಟೇ ಅಪ್ರಿಯವಾದರೂ ಅದರಿಂದ ತಪ್ಪಿಸಿಕೊಂಡರೆ ಅನ್ಯಾಯವಾಗುತ್ತದೆ. ಯಾವ ನಿಬಂಧನೆಗಳೂ ಇಲ್ಲದ ಮಕ್ಕಳನ್ನೂ, ನಿರಂಕುಶವಾಗಿ ವರ್ತಿಸುವ ವಿದ್ಯಾರ್ಥಿಗಳನ್ನೂ ನಾವು ನೋಡಿದಾಗೆಲ್ಲ ತಂದೆತಾಯಿಗಳನ್ನು, ಶಿಕ್ಷಕರನ್ನು ಹಳಿಯದೆ ಇರಲಾರೆವು. ಚಿಕ್ಕವರ ಲೋಪದೋಷಗಳನ್ನು ತಿದ್ದದೆ ಇದ್ದರೆ ಭವಿಷ್ಯತ್ತಿನಲ್ಲಿ ತಮ್ಮ ವಿಶೃಂಖಲ ನಡತೆಯಿಂದ ಬೇರೆಯವರಿಗೆ ದುಃಖವನ್ನು ತರುವುದಲ್ಲದೆ, ಸ್ವತಃ ತಾವೇ ಕಷ್ಟಕ್ಕೆ ಒಳಗಾಗುತ್ತಾರೆ. ಆದ್ದರಿಂದ ಇಂತಹ ತಪ್ಪುಗಳನ್ನು ತಿದ್ದುವುದರಲ್ಲಿ ಯಾವ ದೋಷವೂ ಇಲ್ಲ. ಇಲ್ಲಿ ಉದ್ದೇಶ ಒಳ್ಳೆಯದಾಗಿದೆ, ಅನುಕಂಪದಿಂದ ಕೂಡಿದೆ. ಇಲ್ಲಿರುವ ಏಕೈಕ ಪ್ರೇರಣೆ ಬೇರೆಯವರಿಗೆ ಒಳ್ಳೆಯದಾಗಲಿ, ಅವರಿಗೆ ಉಪಕಾರವಾಗಲಿ ಎಂಬುದು. ಮೊದಲನೆಯದು ಅಹಂಕಾರ (ಸ್ವಾರ್ಥ)ಪೂರಿತ ವಾದ ಮನೋಭಾವನೆ; ನಮ್ಮ ಕಲ್ಪಿತ ಮೇಲ್ಮೆ, ಹೆಮ್ಮೆ ಮತ್ತು ಸ್ವಾರ್ಥಕ್ಕೆ (ಅಹಂಕಾರಕ್ಕೆ) ಸಂಬಂಧಪಟ್ಟದ್ದು. ಅಲ್ಲಿ ಬೇರೆಯವರನ್ನೂ ದೂಷಿಸುವಾಗ ಏನೋ ಒಂದು ತೃಪ್ತಿ, ಸಂತೋಷ. ಎರಡನೆಯ ಉದ್ದೇಶದಲ್ಲಿ ಪ್ರೀತಿಯಿದೆ, ಆತ್ಮೀಯತೆಯಿದೆ. ಬೇರೆಯವರು ಒಳ್ಳೆಯ ಜೀವನ ನಡೆಸಲಿ ಎಂಬ ಉದಾತ್ತ ಭಾವನೆಯಿದೆ. ಅನ್ಯರ ಶಾಂತಿಯುತವಾದ ಜೀವನವಲ್ಲದೆ ಅಲ್ಲಿ ಬೇರೆ ಯಾವ ಕಾಮನೆಯೂ ಇಲ್ಲ.

ಇನ್ನೊಂದು ಆಕ್ಷೇಪಣೆಯೆಂದರೆ ಶ್ರೀಮಾತೆ, ಶ್ರೀರಾಮಕೃಷ್ಣರು ತಮ್ಮ ಭಕ್ತರ ಮತ್ತು ಶಿಷ್ಯರ ತಪ್ಪುಗಳನ್ನು, ನ್ಯೂನತೆಗಳನ್ನು ನೋಡುವುದನ್ನು ನಿಲ್ಲಿಸಲಿಲ್ಲ. ಅನ್ಯರ ತಪ್ಪುಗಳನ್ನು ತಿದ್ದುವ ಅಪ್ರಿಯ ಕಾರ್ಯದ ಹಿಂದೆ ಇವರೀರ್ವರ ಉತ್ಕಟ ಗುರಿ ಯಾವುದಿತ್ತು ಎಂಬುದನ್ನು ತಿಳಿಯುವುದು ಅವಶ್ಯ. ಅವರ ಏಕಮಾತ್ರ ಉದ್ದೇಶ ಭಕ್ತರ ಮಂಗಲ, ಅವರ ದುಃಖ ನಿವಾರಣೆ ಮತ್ತು ಆಧ್ಯಾತ್ಮಿಕ ಪ್ರಗತಿಯಲ್ಲದೆ ಬೇರೆ ಯಾವ ಕಾಮನೆಯೂ ಇರಲಿಲ್ಲ. ಅದು ನಿಃಸ್ವಾರ್ಥ ಪ್ರೇಮದ ಸಂಕೇತ. ಭಕ್ತರ ಉದ್ಧಾರಕ್ಕಾಗಿಯೇ ಅವರು ಜನ್ಮತಾಳಿ ಭೂಮಿಗೆ ಬಂದವರು. ಆ ಕಾರ್ಯದಿಂದ ಅವರಿಗೆ ನಿವೃತ್ತಿಯಿಲ್ಲ. ಅದೇ ಕಾರಣಕ್ಕಾಗಿ ಕೆಲವು ಸಲ ನಯವಾಗಿ ಅಥವಾ ಸೂಚ್ಯವಾಗಿ ಅಥವಾ ಅನಿವಾರ್ಯ ಸಂದರ್ಭಗಳಲ್ಲಿ ಕೋಪದಿಂದ ಗದರಿಸುವುದು – ಈ ಎಲ್ಲ ಉಪಾಯಗಳನ್ನು ಅವರು ಅಳವಡಿಸಿಕೊಂಡದ್ದನ್ನು ನಾವು ನೋಡಬಹುದು. ಆದರೆ ಅವುಗಳ ಹಿಂದಿರುವ ಉದಾತ್ತ ಉದ್ದೇಶವನ್ನು ನಾವು ಮರೆಯಬಾರದು.

ವಿಶೇಷವಾಗಿ ಶ್ರೀಮಾತೆ ಇತರರ ಸ್ವಾರ್ಥಪೂರ್ಣವಾದ, ಸಂಕೀರ್ಣವಾದ ಮತ್ತು ಅಹಂಕಾರದಿಂದ ಕೂಡಿದ ನಡತೆಯನ್ನು, ಸಿಟ್ಟಿನ ಪ್ರತಿಕ್ರಿಯೆಯನ್ನು ಕಂಡರೆ ತಮ್ಮ ಅಸಂತೋಷವನ್ನು

ಕೂಡಲೇ ವ್ಯಕ್ತಪಡಿಸುತ್ತಿದ್ದರು. ಅನ್ಯಾಯವನ್ನು ಅವರು ಎಂದಿಗೂ ಸಹಿಸುತ್ತಿರಲಿಲ್ಲ. ಸಾಧ್ಯವಿದ್ದಲ್ಲೆಲ್ಲ ತಪ್ಪನ್ನು ತೋರಿಸಿ ತಿದ್ದಿಕೊಳ್ಳಲು ಸಹಾಯ ಮಾಡುತ್ತಿದ್ದರು. ಅಜ್ಞಾನದಿಂದಾಗಲಿ ಅಥವಾ ಉದ್ದೇಶ ಪೂರ್ವಕವಾಗಲಿ ತಮ್ಮ ಆತ್ಮೀಯರು ಬೇರೆಯವರ ಮನಸ್ಸನ್ನು ನೋಯಿಸದಂತೆ ನೋಡಿಕೊಳ್ಳುತ್ತಿದ್ದರು. ಬದುಕಿನಲ್ಲಿ ಆಗಲೇ ಸಾಕಷ್ಟು ನೋವಿದೆ, ದುಃಖವಿದೆ; ಅದನ್ನು ಕಡಿಮೆ ಮಾಡಬೇಕೇ ಹೊರತು ಹೆಚ್ಚಿಸಬಾರದು. ತಾಯಿಯವರು ಸ್ವಭಾವತಃ ಅತ್ಯಂತ ಮೃದು, ಕಾರುಣ್ಯಮೂರ್ತಿ. ಆದರೆ ಬೇರೆಯವರ ಒಳಿತಿಗಾಗಿ ಕಠೋರ ರೂಪವನ್ನು ಪ್ರದರ್ಶಿಸುವುದಕ್ಕೂ ಅವರು ಹಿಂಜರಿಯುತ್ತಿರಲಿಲ್ಲ. ಇಂಥ ಕೆಲವು ಸಂದರ್ಭಗಳನ್ನು ಅವರ ಜೀವನದಲ್ಲಿ ಕಾಣಬಹುದು.

ಶ್ರೀರಾಮಕೃಷ್ಣರು ತೀರಿಹೋದ ಮೇಲೆ ಶಾರದಾದೇವಿಯವರು ಕಾಮಾರಪುಕುರಕ್ಕೆ ಹೋಗಿ ಅಲ್ಲಿ ಏಕಾಕಿಯಾಗಿ ವಾಸಿಸತೊಡಗಿದರು. ಬಹು ಕಷ್ಟದ ದಿನಗಳವು. ಹರೀಶ ಶ್ರೀರಾಮಕೃಷ್ಣರ ಭಕ್ತ. ಅವನು ಆಗಾಗ ಬಾರಾನಗರ ಮಠಕ್ಕೆ ಹೋಗಿ ಸಂನ್ಯಾಸಿ ಶಿಷ್ಯರನ್ನು ನೋಡಿಕೊಂಡು ಹೋಗುತ್ತಿದ್ದ. ಇದನ್ನು ನೋಡಿದ ಹರೀಶನ ಪತ್ನಿಗೆ ದಿಗಿಲಾಯಿತು, ಎಲ್ಲಿ ತನ್ನ ಪತಿ ಸಂಸಾರ ಬಿಟ್ಟುಬಿಡುತ್ತಾನೊ ಎಂದು. ಅವನ ಮನಸ್ಸನ್ನು ಪರಿವರ್ತಿಸಲು ಅವಳು ರಹಸ್ಯವಾಗಿ ಯಾವಾವುದೋ ಔಷಧಿಗಳನ್ನು ಪ್ರಯೋಗಿಸಿದಳು. ಇದರ ಪರಿಣಾಮವಾಗಿ ಹರೀಶನ ಬುದ್ಧಿ ಕೆಟ್ಟಿತು. ಈ ಹುಚ್ಚಿನ ಅವಸ್ಥೆಯಲ್ಲಿ ಅವನು ಕಾಮಾರಪುಕುರಕ್ಕೆ ಬಂದ. ಶ್ರೀಮಾತೆ ಅವನನ್ನು ನೋಡಿದ ತಕ್ಷಣ ಅವರಿಗೆ ಅವನ ಸ್ಥಿತಿ ಅರ್ಥವಾಯಿತು. ಹರೀಶನ ಹುಚ್ಚುತನ ಒಂದು ದಿನ ವಿಪರೀತವಾಗಿ, ಶ್ರೀಮಾತೆಯವರು ದೊಡ್ಡ ಸಂಕಟದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಅದನ್ನು ಅವರೇ ಈ ರೀತಿ ವರ್ಣಿಸಿದ್ದಾರೆ: ''ಒಂದು ದಿನ ನೆರೆಮನೆಯಿಂದ ಹಿಂದಿರುಗಿ ಬರುತ್ತಿದ್ದೆ. ನಾನು ಮನೆಯ ಅಂಗಳವನ್ನು ಪ್ರವೇಶಿಸುತ್ತಿದ್ದಂತೆಯೆ ಹರೀಶ ನನ್ನನ್ನು ಅಟ್ಟಿಸಿಕೊಂಡು ಬಂದ. ಆಗ ಅವನ ತಲೆ ಸರಿ ಇರಲಿಲ್ಲ. ಮನೆಯಲ್ಲಿ ಬೇರೆ ಯಾರೂ ಇರಲಿಲ್ಲ. ಹೇಗೆ ಇವನಿಂದ ತಪ್ಪಿಸಿಕೊಳ್ಳುವುದು? ನಾನು ಹೆದರಿಕೆಯಿಂದ ಅಲ್ಲಿದ್ದ ಹುಲ್ಲಿನ ಕಣಜದ ಸುತ್ತ ಓಡತೊಡಗಿದೆ. ಅವನು ಹಿಂಬಾಲಿಸಿದ. ಏಳು ಸುತ್ತು ಓಡಿದ ಮೇಲೆ ನನಗೆ ಸುಸ್ತಾಯಿತು, ಓಡಲು ಶಕ್ತಿಯಿರಲಿಲ್ಲ. ಆಗ ನಾನು ನನ್ನ ನಿಜರೂಪವನ್ನು ತಳೆದು ದೃಢವಾಗಿ ನಿಂತೆ. ಅವನ ಎದೆಯ ಮೇಲೆ ಮೊಳಕಾಲೂರಿ ನಾಲಿಗೆಯನ್ನು ಹಿಡಿದೆಳೆದು ನಾಲ್ಕಾರು ಸಲ ಕೆನ್ನೆಯ ಮೇಲೆ ಜೋರಾಗಿ ಹೊಡೆದೆ. ಅವನು ಉಸಿರು ಕಟ್ಟಿ ಒದ್ದಾಡಿದ. ನನ್ನ ಕೈ ಬೆರಳುಗಳೆಲ್ಲ ಕೆಂಪಾದವು.'' ಹರೀಶನ ಹುಚ್ಚು ಕ್ರಮಶಃ ಹೊರಟುಹೋಯಿತು. ಅಲ್ಲಿಂದ ಅವನು ಬೃಂದಾವನಕ್ಕೆ ಹೊರಟುಹೋದ. ಅಲ್ಲಿ ಎಲ್ಲರಂತೆ ಜೀವನವನ್ನು ಸಾಗಿಸಿದ.

ಶಾರದಾದೇವಿಯವರು ತಮ್ಮ ತವರೂರಾದ ಜಯರಾಮಬಾಟಿಯಿಂದ ಕಲ್ಕತ್ತೆಗೆ ಬರುವಾಗ ಮಧ್ಯದಲ್ಲಿ ಕೋಯಲ್‌ಪಾರಾ ಎಂಬ ಗ್ರಾಮದಲ್ಲಿ ಸ್ವಲ್ಪಹೊತ್ತು ವಿಶ್ರಮಿಸುತ್ತಿದ್ದರು. ಕಾಲಕ್ರಮೇಣ ಭಕ್ತರು ಬಂದು ಚಿಕ್ಕ ಆಶ್ರಮವನ್ನು (ಜಗದಾಂಬ ಆಶ್ರಮ) ಅವರ ಅನುಕೂಲಕ್ಕಾಗಿ ಕಟ್ಟಿದರು. ಕೋಯಲ್‌ಪಾರಾ ಆಶ್ರಮದ ಅಧ್ಯಕ್ಷರು ಆಶ್ರಮವಾಸಿಗಳನ್ನು ಚೆನ್ನಾಗಿ ನೊಡಿಕೊಳ್ಳುತ್ತಿರಲಿಲ್ಲ. ಬ್ರಹ್ಮಚಾರಿಗಳಿಂದ ಸಾಕಷ್ಟು ದುಡಿಸಿಕೊಂಡು ಅವರಿಗಾಗಿ ಏನನ್ನೂ ಮಾಡುತ್ತಿರಲಿಲ್ಲ. ಅವರ ಸುಖದುಃಖ, ಆರೋಗ್ಯದ ವಿಷಯದಲ್ಲಿ ಯಾವ ಆಸಕ್ತಿಯನ್ನೂ ತೋರಿಸುತ್ತಿರಲಿಲ್ಲ. ಇದರ ಪರಿಣಾಮವಾಗಿ ಕೆಲವರು ಆಶ್ರಮವನ್ನು ತ್ಯಜಿಸಿ, ಶ್ರೀಮಾತೆಯವರಲ್ಲೋ ಅಥವಾ ಬೇರೆ ಆಶ್ರಮಗಳಲ್ಲೋ ಆಶ್ರಯ ಪಡೆಯತೊಡಗಿದರು. ಅಧ್ಯಕ್ಷರಿಗೆ ಇದು ಸರಿತೋರಲಿಲ್ಲ. ಶ್ರೀಮಾತೆಯವರಿಗೆ ಆಶ್ರಮವಾಸಿಗಳ ವಿರುದ್ಧ ದೂರಿದರು. ''ಮಾತೆ, ಮೊದಲು ಈ ಬ್ರಹ್ಮಚಾರಿಗಳು ಬಹಳ ವಿಧೇಯರಾಗಿರುತ್ತಿದ್ದರು. ಈಗ ಬುದ್ಧಿವಂತರಾಗಿದ್ದಾರೆ. ನನ್ನ ಮಾತನ್ನು ಕೇಳುವುದಿಲ್ಲ. ನೀವು ಅಥವಾ ಬೇರೆ ಆಶ್ರಮಗಳು ಅವರನ್ನು ಪ್ರೀತಿಯಿಂದ ಇಟ್ಟುಕೊಳ್ಳುತ್ತೀರಿ. ನೀವು ಆಶ್ರಯ ಕೊಡದೆ ಸ್ವಲ್ಪ ಬುದ್ಧಿ ಹೇಳಿ, ಮರಳಿ ಕಳಿಸಿದರೆ ನನ್ನ ಮಾತು ಕೇಳುತ್ತಾರೆ. ಆದ್ದರಿಂದ ದಯವಿಟ್ಟು ಅವರಿಗೆ ಆಶ್ರಯ ಕೊಡಬೇಡಿ.'' ಶಾರದಾದೇವಿಯವರು ಈ ಮಾತುಗಳನ್ನು ಕೇಳಿ ಕ್ರೋಧತಪ್ತರಾದರು. ಅಸಹನೆಯ ಸ್ವರದಲ್ಲಿ ಹೇಳಿದರು, ''ಎಂಥ ಅವಿವೇಕದ ಮಾತುಗಳನ್ನು ನೀನು ಹೇಳುತ್ತಿರುವೆ! ಅವರಿಗೆಲ್ಲೂ ಬೇರೆ ಜಾಗ ಸಿಗದಂತೆ ಮಾಡಬೇಕೇ ನಾನು? ಅವರು ನನ್ನ ಮಕ್ಕಳು, ಶ್ರೀರಾಮಕೃಷ್ಣರೆಡೆಗೆ ಬಂದಿರುವರು. ಅವರು ಎಲ್ಲಿಗೆ ಹೋದರೂ ಶ್ರೀರಾಮಕೃಷ್ಣರು ಅವರನ್ನು ನೋಡಿಕೊಳ್ಳುತ್ತಾರೆ. ಅವರಿಗೆ ಎಲ್ಲೂ ಆಶ್ರಯ ದೊರೆಯದಿರಲಿ ಎಂದು ನನ್ನ ಬಾಯಿಯಿಂದ ಹೇಳಿಸಬೇಕೆಂದಿರುವೆಯಲ್ಲವೆ ನೀನು? ನಾನು ಖಂಡಿತವಾಗಿ ಹಾಗೆ ಹೇಳಲಾರೆ. ತಮ್ಮ ಸ್ವಂತ ಮಕ್ಕಳನ್ನು ಈ ರೀತಿ ಶಿಕ್ಷಿಸಿದರೆ ಅವರೂ ಸಹ ಮನೆಬಿಟ್ಟು ಹೋಗುವರು.'' ಶ್ರೀಮಾತೆಯವರ ಕೋಪದಿಂದ ಕೆಂಪೇರಿದ ಮುಖವನ್ನು, ಉಚ್ಚ ಸ್ವರವನ್ನು ಕೇಳಿ ಅಲ್ಲಿದ್ದವರೆಲ್ಲ ಆತಂಕಗೊಂಡರು. ಅಧ್ಯಕ್ಷರು ಕೂಡಲೆ ತಮ್ಮ ತಪ್ಪನ್ನರಿತು ತಾಯಿಯವರ ಪಾದಕ್ಕೆ ಬಿದ್ದು ಅವರ ಕ್ಷಮೆ ಕೋರಿದರು.

ಒಮ್ಮೆ ಒಬ್ಬ ಡಾಕ್ಟರರ ಪತ್ನಿ ಶಾರದಾದೇವಿಯವರ ದರ್ಶನಕ್ಕಾಗಿ ಬಂದರು. ಪ್ರಣಾಮ ಮಾಡಿದ ಮೇಲೆ ಅವಳು ಪ್ರಾರ್ಥಿಸಿದಳು, ''ತಾಯಿ, ದಯವಿಟ್ಟು ಆಶೀರ್ವಾದ ಮಾಡಿ, ನನ್ನ ಡಾಕ್ಟರ್ ಪತಿಯ ವೃತ್ತಿ (practice) ಹೆಚ್ಚಾಗುವಂತೆ.'' ಶ್ರೀಮಾತೆಯವರಿಗೆ ಈ ಪ್ರಾರ್ಥನೆಯನ್ನು ಕೇಳಿ ಆಶ್ಚರ್ಯವಾಯಿತಲ್ಲದೆ, ವೇದನೆಯೂ ಆಯಿತು. ಅವರು ಹೇಳಿದರು, ''ಮಗಳೆ! ಎಂಥ ಪ್ರಾರ್ಥನೆ ನಿನ್ನದು! ಜನಗಳು ರೋಗಗ್ರಸ್ತರಾಗಲಿ, ದುಃಖಪಡೆಯಲಿ ಎಂದು ಆಶೀರ್ವಾದ ಮಾಡಲೆ? ನನ್ನಿಂದ ಅದೆಂದಿಗೂ ಸಾಧ್ಯವಿಲ್ಲ. ಎಲ್ಲರೂ ಆರೋಗ್ಯದಿಂದಿರಲಿ, ಎಲ್ಲರೂ ಆನಂದದಿಂದಿರಲಿ. ಯಾರೂ ದುಃಖಪಡದೆ ಇರಲಿ.''

ಶ್ರೀರಾಮಕೃಷ್ಣರು ಸಹ ಅತ್ಯಂತ ಕಟ್ಟುನಿಟ್ಟಿನ ಗುರುಗಳಾಗಿದ್ದರು. ಭಕ್ತರ ತಪ್ಪುಗಳನ್ನು ಆಗಿಂದಾಗಲೆ ತಿದ್ದಿ ಸರಿಪಡಿಸುತ್ತಿದ್ದರು. ತಮ್ಮ ಭಕ್ತ ಅಥವಾ ಶಿಷ್ಯರಲ್ಲಿ ರಾಗದ್ವೇಷ, ಸ್ವಾರ್ಥ, ಅಹಂಕಾರ,

ಕ್ರೋಧ ಇತ್ಯಾದಿ ಕ್ಷುದ್ರಗುಣಗಳನ್ನು ಗಮನಿಸಿದರೆ ಸಂದರ್ಭಕ್ಕನು ಸಾರವಾಗಿ ನಿವಾರಿಸದೆ ಬಿಡುತ್ತಿರಲಿಲ್ಲ. ಏಕೆಂದರೆ ಇವೆಲ್ಲ ಆಧ್ಯಾತ್ಮಿಕ ಪ್ರಗತಿಗೆ ಬಾಧಕಗಳು. ಅವುಗಳಿರುವವರೆಗೆ ಆಧ್ಯಾತ್ಮಿಕ ಉನ್ನತಿ ಯಾಗಲಾರದು. ನಿಜವಾದ ಗುರು ಇವನ್ನೆಲ್ಲ ಗಮನಿಸಿಯೂ ಮೌನ ದಿಂದಿರಲಾರ. ಮನಸ್ಸು ಚಿಕ್ಕಮಕ್ಕಳ ಮನಸ್ಸಿನಂತೆ ಶುದ್ಧವಾಗ ಬೇಕು, ನಿರ್ಮಲವಾಗಬೇಕು. ಆಗಲೇ ಭಗವತ್‌ಸಾಕ್ಷಾತ್ಕಾರ ಸಾಧ್ಯ. ಗುರು 'ಉತ್ತಮ ವೈದ್ಯ'ನಂತೆ ಕೆಲವು ಸಲ ಶಸ್ತ್ರಚಿಕಿತ್ಸೆಯನ್ನೂ ಸಹ ಪ್ರಯೋಗಿಸಿ ರೋಗವನ್ನು ಗುಣಪಡಿಸಲು ಯತ್ನಿಸುತ್ತಾನೆ. ಶ್ರೀರಾಮಕೃಷ್ಣರ ಜೀವನದಲ್ಲಿಯೂ ಈ ತರಹದ ಉದಾಹರಣೆ ಗಳನ್ನು ನೋಡಬಹುದು.

ಒಂದು ದಿನ ಪೂಜಾಸಮಯದಲ್ಲಿ ರಾಣಿ ರಾಸಮಣಿ ದಕ್ಷಿಣೇ ಶ್ವರಕ್ಕೆ ಬಂದಳು. ಶ್ರೀರಾಮಕೃಷ್ಣರನ್ನು ಕೆಲವು ಭಕ್ತಿಗೀತೆಗಳನ್ನು ಹಾಡಿರೆಂದು ಕೋರಿದಳು. ಅವರು ತನ್ಮಯರಾಗಿ ಹಾಡುತ್ತಿದ್ದಾಗ ರಾಣಿಯ ಮನಸ್ಸು ಕೋರ್ಟಿನಲ್ಲಿದ್ದ ಯಾವುದೋ ಮೊಕದ್ದಮೆ ಕುರಿತು ಆಲೋಚಿಸತೊಡಗಿತು. ಅಂತರ್ಯಾಮಿಯಾದ ಶ್ರೀರಾಮ ಕೃಷ್ಣರಿಗೆ ಇದು ಗೊತ್ತಾಗಿ, ''ಏನು, ಇಲ್ಲಿಯೂ ಜಗದ್ಧಾತ್ರಿಯ ಎದುರಿಗೆ ಕುಳಿತು ಅದೇ ವಿಷಯ ಚಿಂತನೆಯೆ?'' ಎಂದು ಆಕೆಯ ಕೆನ್ನೆಗೆ ಏಟುಕೊಟ್ಟರು. ರಾಣಿಗೆ ತಕ್ಷಣ ತನ್ನ ತಪ್ಪಿನ ಅರಿವಾಗಿ ಜಗ ನ್ಮಾತೆಯೇ ತನಗೆ ಶಿಕ್ಷೆಯನ್ನು ವಿಧಿಸಿದಳು ಎಂದು ನಂಬಿದಳು.

ಒಮ್ಮೆ ಒಬ್ಬ ಭಕ್ತ ದಕ್ಷಿಣೇಶ್ವರಕ್ಕೆ ಬಂದು, ಬಹು ಒರಟಾಗಿ ವ್ಯವ ಹರಿಸಿದ. ಅಲ್ಲಿದ್ದ ಅದ್ಭುತಾನಂದರಿಗೆ ಇದು ಎಳ್ಳಷ್ಟೂ ಹಿಡಿಸಲಿಲ್ಲ. ಅವರು ಸಿಟ್ಟಿನಿಂದ ಈ ಭಕ್ತನನ್ನು ಬೈದರು. ಶ್ರೀರಾಮಕೃಷ್ಣರು ಎಲ್ಲ ವನ್ನೂ ಸುಮ್ಮನೆ ನೋಡುತ್ತಿದ್ದರು. ಭಕ್ತ ಅಲ್ಲಿಂದ ಹೊರಟು ಹೋದ ಮೇಲೆ ಅದ್ಭುತಾನಂದರನ್ನು ಕರೆದು ಹೇಳಿದರು: ''ಇಲ್ಲಿ ಬರುವವ ರನ್ನು ನೀನು ಆ ತರಹ ಬೈದದ್ದು ತಪ್ಪು. ಸಂಸಾರದ ತಾಪತ್ರಯದಲ್ಲಿ ಸಿಕ್ಕು ಸಾಕಷ್ಟು ದುಃಖ ಅನುಭವಿಸುತ್ತಿರುವ ಅವರು ಸ್ವಲ್ಪ ಶಾಂತಿ ಗಾಗಿ, ನೆಮ್ಮದಿಗಾಗಿ ಇಲ್ಲಿಗೆ ಬರುತ್ತಾರೆ. ಇಲ್ಲಿಯೂ ಸಹ ಚಿಕ್ಕ ಪುಟ್ಟ ಕಾರಣಕ್ಕಾಗಿ ಅವರನ್ನು ಬೈದರೆ, ಅವರು ಬೇರೆ ಎಲ್ಲಿಗೆ ಹೋಗಲು ಸಾಧ್ಯ? ನಾಳೆ ನೀನು ಆ ಭಕ್ತರ ಮನೆಗೆ ಹೋಗಿ ಕ್ಷಮೆ ಕೇಳು.'' ಅದ್ಭುತಾನಂದರು ಮುಂಗೋಪಿಗಳಾಗಿದ್ದರು. ಈ ಮುಂಗೋಪ ದಿಂದ ಅವರನ್ನು ಮುಕ್ತಗೊಳಿಸುವುದೇ ಗುರುವಿನ ಉದ್ದೇಶ.

ಮಹೇಂದ್ರನಾಥಗುಪ್ತರು ('ಮ') ಕೊಲಕತ್ತಾ ವಿಶ್ವವಿದ್ಯಾಲ ಯದ ಪದವೀಧರರು. ಒಳ್ಳೆಯ ವಿದ್ವಾಂಸರು, ಚೆನ್ನಾಗಿ ಓದಿಕೊಂಡ ವರು. ಭಗವಂತನ ಸಾಕ್ಷಾತ್ಕಾರ ಅಥವಾ ಬ್ರಹ್ಮಜ್ಞಾನವು ಗ್ರಂಥಗಳ ಅಧ್ಯಯನದಿಂದಲೇ ಸಾಧ್ಯ ಎಂಬ ದೃಢ ನಂಬಿಕೆ ಅವರದು. ಹೆಚ್ಚು ಓದಿದಷ್ಟೂ ಭಗವಂತನ ವಿಷಯದಲ್ಲಿ ಜ್ಞಾನ ಸಹ ಹೆಚ್ಚಾಗುವುದು ಎಂದು ಅವರ ಗ್ರಹಿಕೆ. ಅದೇ ನಂಬಿಕೆಯಿಂದ ಶ್ರೀರಾಮಕೃಷ್ಣರನ್ನು ಮೊದಲನೆಯ ಸಲ ಭೇಟಿಯಾದರು. ಶ್ರೀರಾಮಕೃಷ್ಣರು ಯಾವ ಪುಸ್ತಕಗಳನ್ನೂ ಓದಿದವರೇ ಅಲ್ಲ ಎಂಬುದನ್ನು ಕೇಳಿ ಅವರಿಗೆ ಬಹು ಆಶ್ಚರ್ಯವಾಯಿತು. ಗ್ರಂಥಗಳ ಸಹಾಯವಿಲ್ಲದೆ, ಪಾಂಡಿತ್ಯವಿಲ್ಲದೆ ಸಾಕ್ಷಾತ್ಕಾರ ಹೇಗೆ ಸಾಧ್ಯ? ಪ್ರಥಮ ಭೇಟಿಯಲ್ಲಿ ಶ್ರೀರಾಮಕೃಷ್ಣರು ಮಹೇಂದ್ರನಾಥರ ವೈಯಕ್ತಿಕ ಸಮಾಚಾರ ಕೇಳಿ ತಿಳಿದುಕೊಂಡರು. ಸಂವಾದದ ಮಧ್ಯೆ ಅವರು ಕೇಳಿದರು, ''ನಿನ್ನ ಹೆಂಡತಿ ಎಂತಹ ವಳು, ಅವಳ ಸ್ವಭಾವ ಎಂತಹುದು?'' ಅದಕ್ಕೆ 'ಮ' ಹೇಳಿದರು: ''ಅವಳೇನೋ ಒಳ್ಳೆಯವಳೇ, ಆದರೆ ಅವಳಿಗೆ ಅಷ್ಟೊಂದು ಜ್ಞಾನ ವಿಲ್ಲ.'' ಅದನ್ನು ಕೇಳಿ ಶ್ರೀರಾಮಕೃಷ್ಣರು ಅಸಮಾಧಾನದಿಂದ ಹೇಳಿ ದರು, ''ಓಹೋ! ನೀನೇನು ಮಹಾಜ್ಞಾನಿಯೊ?'' ಶ್ರೀರಾಮಕೃಷ್ಣ ರಿಗೆ **ದೇವರನ್ನು ಅರಿಯುವುದೆ ಜ್ಞಾನ, ಅವನನ್ನು ಅರಿಯದಿರುವುದೆ ಅಜ್ಞಾನ.** ಈ ರೀತಿಯಾಗಿ ಗುರುದೇವರು 'ಮ' ಅವರ ಅಹಂಕಾರಕ್ಕೆ ಪ್ರಥಮ ಪ್ರಹಾರವನ್ನು ಕೊಟ್ಟರು. ತಮ್ಮ ಕಟೂಕ್ತಿಗಳಿಂದ ಕ್ರಮಶಃ 'ಮ' ಅವರ ಅಹಂಕಾರವನ್ನು ನಾಶಮಾಡಿದರು.

ಶ್ರೀಶಾರದಾದೇವಿ ಮತ್ತು ಶ್ರೀರಾಮಕೃಷ್ಣರು ಲೋಕ ಗುರು ಗಳು. ಅವರು ಎಲ್ಲರಿಗಾಗಿ ಬಂದವರು. ಅವರೆಡೆಗೆ ಬಂದ ಜಿಜ್ಞಾಸು ಗಳು, ಭಕ್ತರು ತಮ್ಮ ತಲೆಯಲ್ಲಿ ಏನೇನೋ ಚಿತ್ರವಿಚಿತ್ರ ಕಲ್ಪನೆ, ನಂಬಿಕೆಗಳನ್ನು ತುಂಬಿಕೊಂಡು ಬಂದವರು. ಇಂಥವರ ದೋಷ ಗಳನ್ನು ತೊಡೆದು, ಅವರಲ್ಲಿ ಉದಾತ್ತ ವಿಶಾಲ ದೃಷ್ಟಿಕೋನವನ್ನು ಬೆಳೆಸುವುದು ಸುಲಭವಾದ ಕಾರ್ಯವಾಗಿರಲಿಲ್ಲ. ಅದು ಮೇಲು ನೋಟಕ್ಕೆ ಕಹಿಯಾಗಿ ಕಂಡರೂ ಅದರ ಫಲ – ಭಕ್ತರ ಉದ್ಧಾರ.

ನಮ್ಮೆದುರಿಗಿರುವ ಇನ್ನೊಂದು ಸಮಸ್ಯೆಯೆಂದರೆ, ಹೇಗೆ ಈ ದುರಭ್ಯಾಸದಿಂದ ಪಾರಾಗುವುದು? ಕ್ವಚಿತ್ತಾಗಿ ನಾವು ಬೇರೆಯವರ ಒಳ್ಳೆಯ ಗುಣಗಳನ್ನು ಪ್ರಶಂಸಿಸಿದರೂ ನಮ್ಮ ಕಣ್ಣಿಗೆ ಮೊದಲು ಬೀಳುವುದು ಬೇರೆಯವರ ದೋಷಗಳೆ. **ಯಾರನ್ನೂ ನಾವು ನಮ ಗಿಂತ ಉತ್ತಮರಾಗಿರುವರೆಂದು ಸಹಜವಾಗಿ ಒಪ್ಪಿಕೊಳ್ಳುವುದಿಲ್ಲ. ಈ ಅಹಂಕಾರವೇ ನಮ್ಮ ಅಶಾಂತಿಗೆ ಕಾರಣ, ಬೇರೆಯವರ ಒಳ್ಳೆಯ ತನವಲ್ಲ.** ನಮ್ಮ ಪರಸ್ಪರ ಸಂಬಂಧ ಹೊರನೋಟಕ್ಕೆ ಚೆನ್ನಾಗಿಯೇ ಕಾಣುತ್ತದೆ. ಆದರೆ ಅಲ್ಲಿ ಪ್ರೀತಿ, ಸಹೃದಯತೆ ಮತ್ತು ವಿಶ್ವಾಸಗಳಿಲ್ಲ.

ಪತಂಜಲಿ ತನ್ನ ಯೋಗಶಾಸ್ತ್ರದಲ್ಲಿ ಈ ಹಾನಿಕರವಾದ ಪ್ರವೃತ್ತಿ ಯಿಂದ ಪಾರಾಗುವ ಒಂದು ಸಾಧನೆಯನ್ನು ಸೂಚಿಸುತ್ತಾನೆ: '**ವಿತರ್ಕ ಬಾಧನೇ ಪ್ರತಿಪಕ್ಷ ಭಾವನಮ್**' *(೨. ೩೩)* ವಿತರ್ಕ ಎಂದರೆ ಕೆಟ್ಟ ಪ್ರವೃತ್ತಿಗಳು ಅಥವಾ ಬಾಧಕವಾದ ವಿಚಾರಗಳು. ಯಾವಾಗ ಮನಸ್ಸಿ ನಲ್ಲಿ ಬೇರೆಯವರನ್ನು ನಿಂದಿಸಬೇಕು, ಕೀಳಾಗಿ ಕಾಣಬೇಕೆಂಬ ಪ್ರಬಲ ಇಚ್ಛೆ ಹುಟ್ಟುವುದೋ ಆಗ 'ಪ್ರತಿಪಕ್ಷ ಭಾವನಮ್' ತರಬೇಕು – ಅಂದರೆ ಪ್ರತಿರೋಧವಾಗಿ ಸ್ತುತಿ ಅಥವಾ ಮೆಚ್ಚುಗೆಯ ವಿಚಾರಗಳನ್ನು ಸೃಷ್ಟಿಸಬೇಕು. ಇದರ ಅರ್ಥ **ಬೇರೆಯವರಲ್ಲಿ ಬರಿ ದುರ್ಗುಣಗಳನ್ನು ಹುಡುಕುವ ಬದಲು, ಒಂದೆರಡು ಒಳ್ಳೆಯ ಗುಣಗಳನ್ನು ನೋಡಲು ಕಲಿಯಬೇಕು** ಮತ್ತು ಅವುಗಳ ಪ್ರಶಂಸೆಯನ್ನು ಮಾಡಬೇಕು. ಇದ ರಿಂದ ಆ ವ್ಯಕ್ತಿ ಮೇಲೆ ಬರಲು, ಸುಧಾರಿಸಲು ಸಹಾಯವಾಗುವು ದಲ್ಲದೆ ನಮ್ಮ ಮನಸ್ಸು ಸಹ ಉದಾರವಾಗುವುದು, ಶುದ್ಧವಾಗು ವುದು. ಇದಲ್ಲದೆ ಆ ಒಳ್ಳೆಯ ಗುಣಗಳನ್ನು ನಮ್ಮ ಆಚರಣೆ ಯಲ್ಲಿಯೂ ಅನುಸರಿಸಬಹುದು. ಎಲ್ಲರಲ್ಲಿ ಕೆಟ್ಟದ್ದೂ ಇದೆ, ಒಳ್ಳೆಯದೂ ಇದೆ. ಆದರೆ ಒಳ್ಳೆಯದನ್ನು ನೋಡಲು ಕಲಿಯಬೇಕು. ಇದರಿಂದ ದ್ವೇಷ, ಅಸೂಯೆ, ಅಹಂಕಾರಗಳು ಕಡಿಮೆಯಾಗುತ್ತವೆ.